# ಅಂಜಲಿಗೀಗ ಇಪ್ಪತ್ಮೂರು




ನೀಲಿಶಾಯಿಯಲ್ಲಿ ಬರೆದಿದ್ದ
ಅವಳ ಹಾಜರಾತಿಯ ಹೆಸರೀಗ ಮಾಸಿದೆ
ಅವಳು ಹಟಕ್ಕೆ ಬಿದ್ದು ಕೂರುತ್ತಿದ್ದ
ಕಿಟಕಿಯಂಚಿನ ಬೆಂಚಿನಲ್ಲಿ
ಅದೇ ಸ್ಕೂಲಿನ ಆಯಾಳ ಮಗಳಿದ್ದಾಳೆ

ಅಪ್ಪನ ಲೂನಾ ಮನೆಯ ಮೂಲೆಯಲ್ಲಿ
ಜೇಡರ ಬಲೆಯೊಂದಿಗೆ ಸೆಣಸುತ್ತ
ದೂಳು ಹಿಡಿಯುತ್ತಿದೆ
ಮನೆಯ ಮುಂದಿನ
ರಸ್ತೆಗೀಗ ಡಾಂಬರು ಬಂದಿದೆ
ಆದರೆ, ಅಂಜಲಿಯ ಮಂದಸ್ಮಿತ ಈಗಿಲ್ಲ

ಅವಳೀಗ
ಹುಟ್ಟುಹಬ್ಬಕ್ಕೆ ದುಂಬಾಲು ಬಿದ್ದು
ಜವಳಿ ಅಂಗಡಿಯಲ್ಲಿ ಬಟ್ಟೆ
ಆರಿಸಿಕೊಳ್ಳುವುದಿಲ್ಲ
ಜತೆ ಕೂತು ತಿಂದ ಕೈ ಬೆವರಿಗೆ
ಅಂಟುವಂತ ಬಣ್ಣದ ಪೆಪ್ಪರಮೆಂಟಿನ
ರುಚಿಯ ನೆನಪಿಟ್ಟುಕೊಂಡಿಲ್ಲ
ನಗುವೂ ಇಲ್ಲ
ಅವಳೀಗಾ ತೀರಾ ಮೌನಿ

ಅಂಜಲಿ–
ನಿನ್ನ ನೆಚ್ಚಿನ ಸುಜಾತ ಮಿಸ್ಸು ಸ್ಕೂಲು
ಬಿಟ್ಟರಂತೆ ಕಣೇ
ಅವರ ಗಂಡ ಈಗಲೂ ಕುಡುಕ
ನಿನ್ನ ಕುಂಟೋಬಿಲ್ಲೆ ಆಟದ ಜತೆಗಾತಿ
ಶಶಿಕಲಾ ಈಗ ಎರಡು ಮಕ್ಕಳ ತಾಯಿ.
ಸಿಕ್ಕಿದ್ದಳು ಮೊನ್ನೆ ಮಕ್ಕಳಿಗೆ
ಸಿರಪ್ ಖರೀದಿಸುವಾಗ
ಹಳೆಯದೆನ್ನಲ್ಲ ನೆನೆದು
ಕಿಸಕ್ಕನೆ ನಕ್ಕಳು ಗೊತ್ತಾ...

ಸ್ಕೂಲಿನ ಕಡೆ ತಿರುವಿನಲ್ಲಿ
ಗೋಲ್ ಗಪ್ಪಾ ಬಂಡಿಯ
ರಾಜಸ್ತಾನಿ ಹುಡುಗ ಇದ್ದನಲ್ಲ
ಅವನ ಅಂಗಡಿಯನ್ನು ಮುಚ್ಚಿಬಿಟ್ಟನಂತೆ
ಪಾಪ ಅವನಪ್ಪನಿಗೆ ಸಕ್ಕರೆ ಕಾಯಿಲೆ
ಮೈತುಂಬಾ ಹಿತ್ತಾಳೆ ಒಡವೆ ತೊಡುತ್ತಿದ್ದ
ಬಾಯಿ ಬಡಕಿ ಅವನಮ್ಮ ಇದ್ದಳಲ್ಲ
ಅವಳೀಗ ಬೇಡಿಕೊಂಡರೂ ಒಂದು
ಮಾತೂ ಆಡುತ್ತಿಲ್ಲ

ಅವತ್ತು ಊರಿಗೆ ರೈಲು
ಹಿಡಿಯುವ ಮುನ್ನ ಸಿಕ್ಕಿದ್ದ.
ನಾಲ್ಕು ಸಾವಿರ ರೂಪಾಯಿ ಸಾಲ ಇದೆ
ಬಂದು ತೀರಿಸುತ್ತೇನೆ ಎಂದ
ನಾನು ಕೆಲಸ ಬಿಟ್ಟುಬಿಟ್ಟೆ ಎಂದೆ
ಒಳ್ಳೆಯದಾಯಿತು ಎಂದು ನಕ್ಕ

ಕಾಲ ನಿಲ್ಲುವುದಿಲ್ಲ ಎನಿಸುತ್ತಿದೆ
ಇವೆಲ್ಲ ಹಳೆಯ ವಿಷಯಗಳೇ ಅಂಜಲಿ
ಇಲ್ಲಿ ಯಾವುದೂ ನಿಲ್ಲುವುದಿಲ್ಲ
ಬಿಡುವು ಮಾಡಿಕೊಂಡು ಸಿಗು
ಇಬ್ಬರೂ ಮತ್ತೆ ಜತೆ ಕೂತು
ಒಂದಿಷ್ಟು ಮಾತನಾಡುವ
ಮರಳಿ ಅದೇ ಸ್ಕೂಲಿನ
ಮಕ್ಕಳಾಗಿ ಬಿಡುವ

● ಸಂದೀಪ್ ಈಶಾನ್ಯ